ಬೇರೆ 44 ಕಡೆಗಳಲ್ಲಿ ಮಾಡಬೇಕೆಂದು ಕಾಮಗಾರಿಗಳನ್ನು ತೆಗೆದು ಕೊಳ್ಳುತ್ತಿದ್ದೇವೆ. ಅಸೆಂಬ್ಲಿ ಮುಗಿದ ಒಂದೆರಡು ದಿವಸದೊಳಗಾಗಿ ಬೆಂಗಳೂರು ನಗರದ ಎಲ್ಲ ಶಾಸಕರುಗಳನ್ನು ಕರೆದು, ಮಾತನಾಡಿ, ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದಲ್ಲಿ ಪ್ರಚಲಿತದಲ್ಲಿರುವ ಕ್ರೀಡೆಗಳ ಬಗ್ಗೆ

242 (1536) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಯುವಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೀತಿಯ ಕ್ರೀಡೆಗಳು ಪ್ರಚಲಿತದಲ್ಲಿದೆ;

ಆ) ಕ್ರೀಡಾಪಟುಗಳಿಗೆ ಯಾವ ರೀತಿಯಲ್ಲಿ ಉತ್ತೇಜನ ನೀಡಲಾಗುತ್ತಿದೆ.

ಇ) ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಯಾವ ರಿತಿಯಲ್ಲಿ ಗೌರವಿಸಲಾಗುತ್ತಿದೆ;

ಈ) ಇವರುಗಳಿಗೆ ಎಷ್ಟು ರೀತಿಯ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತಿದೆ;

ಉ) ಪ್ರತಿ ವರ್ಷ ಪ್ರಶಸ್ತಿಗಳನ್ನು ತಪ್ಪದೇ ನೀಡಲಾಗುತ್ತಿದೆಯೇ;

ಊ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು; ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹನುಮಂತಪ್ಪ ವೈ. ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿ 40 ಕ್ರೀಡೆಗಳು ಪ್ರಚಲಿತದಲ್ಲಿದ್ದು, ಆ ಕ್ರೀಡೆಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಪಂದ್ಯಾವಳಿಯಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನಭತ್ಯೆ, ವೈಜ್ಞಾನಿಕ ತರಬೇತಿ, ವೈದ್ಯಕೀಯ ವೆಚ್ಚ, ಕ್ರೀಡಾ ಸಲಕರಣೆ/ಕ್ರೀಡಾ ಸಮಸಮವಸ್ತ್ರ ನೀಡುವುದಲ್ಲದೆ ಮಾಧ್ಯಮಿಕ/ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಲ್ಲಿ ಅಥವಾ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ್ದಲ್ಲಿ ಅಂತಹ ಕ್ರೀಡಾಪಟುಗಳಿಗೆ ವಾರ್ಷಿಕ ತಲಾ

ರೂ. 600/– ರಂತೆ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡಿ ಉತ್ತೇಜಿಸ ಲಾಗುತ್ತಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪ್ರತಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ಕ್ರೀಡಾಪಟುಗಳಿಗೆ ಪ್ರತಿವರ್ಷ ಸಾಮಾನ್ಯ ಪ್ರಮುಖ ಪರೀಕ್ಷಾ ಘಟಕದ ಮೂಲಕ ವೃತ್ತಿಪರ ಕೋರ್ಟ್‌ಗಳಿಗೆ ಕ್ರೀಡಾ ಕೋಟಾದಡಿ ಸೀಟುಗಳನ್ನು ನೀಡಿ ಉತ್ತೇಜಿಸಲಾಗಿದೆ.

ಇ)

1. ರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ವೈಯಕ್ತಿಕ ಪದಕ ಪಡೆದ ಕ್ರೀಡಾಪಟುಗಳಿಗೆ ಕೆಳಗಿನಂತೆ ಧನ ಸಹಾಯ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
   1) ಚಿನ್ನದ ಪದಕ – ರೂ. 20,000/–
   2) ಬೆಳ್ಳಿ ಪದಕ – ರೂ. 15,000/–
   3) ಕಂಚಿನ ಪದಕ – ರೂ. 10,000/–
2. ಕ್ರೀಡಾ ಸಂಸ್ಥೆಗಳ ವತಿಯಿಂದ ಗುಂಪು ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದ ತಂಡದ ಪ್ರತಿ ಆಟಗಾರರಿಗೆ ರೂ.10,000/– ಬೆಳ್ಳಿ ಪದಕ ಪಡೆದ ಪ್ರತಿ ಆಟಗಾರರಿಗೆ ರೂ.7,000/– ಮತ್ತು ಕಂಚಿನ ಪದಕ ಪಡೆದವರಿಗೆ ರೂ.5,000/–ದಂತೆ ಪ್ರೋತ್ಸಾಕ ಧನ ನೀಡಿ ಗೌರವಿಸಲಾಗುತ್ತಿದೆ.

   ಈ ಕ್ರೀಡಾ ಕೂಟಗಳಲ್ಲಿ ಭಾಗವಹಿಸಲು ತಗಲುವ ವೆಚ್ಚವನ್ನು ಸಂಬಂಧಪಟ್ಟ ಕ್ರೀಡಾ ಸಂಸ್ಥೆಗಳಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಮುಖಾಂತರ ನೀಡಲಾಗುತ್ತಿದೆ.
3. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಕೂಟ/ ಪಂದ್ಯಾವಳಿಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಯು ರೂ. 50,000/– ನಗದು, ಪ್ರಶಸ್ತಿ ಸುರುಳಿ, ಬ್ಲೇಜರ್, ಪ್ಯಾಂಟ್, ಶರ್ಟ್/ಸೀರೆ ಇತ್ಯಾದಿ ಒಳಗೊಂಡಿರುತ್ತದೆ.

ಈ) ಕರ್ನಾಟಕ ಸರ್ಕಾರದಿಂದ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಭಾರತ ಸರ್ಕಾರದಿಂದ ಅರ್ಜುನ ಪ್ರಶಸ್ತಿ, ರಾಜೀವ್ ಗಾಂಧಿ ಖೇಲ್‌ರತ್ನ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಮತ್ತು ಧ್ಯಾನ್‌ಚಂದ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಉ) ಕಾಲಕಾಲಕ್ಕೆ ಪ್ರಶಸ್ತಿಗಳನ್ನು ನೀಡಲು ಕ್ರಮ ವಹಿಸಲಾಗಿದೆ. ಆದರೆ ಏಕಲವ್ಯ ಪ್ರಶಸ್ತಿ ನೀಡುವಲ್ಲಿ ವಿಳಂಬವಾಗಿದ್ದು, 2002 ರಿಂದ 2006ನೇ ಸಾಲಿನವರೆಗಿನ ಏಕಲವ್ಯ ಪ್ರಶಸ್ತಿಯನ್ನು ಬರುವ ಸೆಪ್ಟೆಂಬರ್‌ನಲ್ಲಿ ವಿತರಿಸಲಾಗುವುದು.

ಊ) ಅನುದಾನ ಬಿಡುಗಡೆಯಾಗದೆ ವಿಳಂಬವಾಗಿತ್ತು. ಹಾಲಿ ಸಾಕಷ್ಟು ಅನುದಾನ ದೊರಕಿದ್ದು ಹಿಂದಿನ ಸಾಲಿನ ಪ್ರಶಸ್ತಿಗಳನ್ನು ಸೇರಿ ಈಗ ಅವುಗಳನ್ನು ವಿತರಿಸಲಾಗುವುದು.

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಬಾಲರಾಜ್.ಎಸ್ ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ – 1536ಗೆ ಅನುಬಂಧ–1

1. Athletics
2. Archery
3. Body Building
4. Badminton
5. Billiards
6. Ball Badminton
7. Basketball
8. Boxing
9. Chess
10. Cycling
11. Cricket (Men and Women)
12. Football
13. Gymnastics
14. Hockey (Men and Women)
15. Handball
16. Judo
17. Kho-Kho

18. Kabaddi
19. Power Lifting'
20. Rifle Shooting
21. Rowing
22. Skating
23. Swimming
24. Tennis
25. Table Tennis
26. Teakwondo
27. Triathlon
28. Volleyball
29. Weight Lifting
30. Wrestling
31. Yoga
32. Fencing
33. Equestrian
34. Diving
35. Water Sports (Kayaking, Kenowing and sailing)
36. Marshal Arts (Karate, Kick Boxing, Maithai)
37. Sports Climbing (Wall Climbing)
38. Netball
39. Throw ball
40. Tenicoit

ಶ್ರೀ ಎಸ್.ಬಾಲರಾಜ್ : ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಕ್ರೀಡೆಗೆ ಯಾವ ತರಹದ ತಾತ್ಸಾರದ ಮನೋಭಾವನೆ ಇದೆ, ಕ್ರೀಡಾಪಟು ಗಳಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ, ನಮ್ಮ ರಾಜ್ಯದ ಕ್ರೀಡೆಗಳು ಯಾವ ರೀತಿ ನಶಿಸಿ ಹೋಗುತ್ತಿದೆ ಎಂಬುದರ ಬಗ್ಗೆ ನಾನು ಆತಂಕ ವ್ಯಕ್ತಪಡಿಸಿ ಕೆಲವು ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ಸುಮಾರು 40 ಕ್ರೀಡೆಗಳಿಗೆ ಉತ್ತೇಜನ ನೀಡುತ್ತಿದ್ದೇವೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ, ನನಗೊಂದು ನೋವಿದೆ. ಈ 40 ಕ್ರೀಡೆಗಳಲ್ಲಿ ಯಾವ ಕ್ರೀಡಾಪಟುಗಳನ್ನು ಕೂಡ ನಾವುಗಳು ನೆನಪಿಸಿಕೊಳ್ಳುವಂತಹ ರೀತಿಯಲ್ಲಿ ಅವರುಗಳಿಗೆ ಉತ್ತೇಜನ ಕೊಟ್ಟು, ಅವರನ್ನು ಗೌರವಿಸುವಂತಹ ಮತ್ತು

ಕ್ರೀಡೆಗೆ ಹೆಚ್ಚು ಕೊಡುವ ಕೆಲಸ ಇಡೀ ರಾಜ್ಯದಲ್ಲಿ ನಡೆಯುತ್ತಿಲ್ಲ. ಜೊತೆಗೆ, ಕ್ರೀಡಾಪಟುಗಳಿಗೆ ಯಾವ ರೀತಿಯಲ್ಲಿ ಉತ್ತೇಜನ ನೀಡಲಾಗುತ್ತಿದೆ ಎಂದು ಕೇಳಿದ್ದೇನೆ. ಅದರಲ್ಲಿ ಅವರು ಹೇಳಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ, ದಿನಭತ್ಯೆ, ವೈಜ್ಞಾನಿಕ ತರಬೇತಿ, ವೈದ್ಯಕೀಯ ವೆಚ್ಚ, ಕ್ರೀಡಾ ಸಲಕರಣೆ, ಕ್ರೀಡಾ ಸಮವಸ್ತ್ರ ನೀಡುವುದಲ್ಲದೇ..... ಎಂದು ವಿಷಯ ಪ್ರಾರಂಭಿಸಿದ್ದಾರೆ. ಪದ್ಯಾವಳಿಯಲ್ಲಿ ಭಾಗವಹಿಸಲು ಎಂದರೆ, ಯಾವ ರೀತಿ ಭಾಗವಹಿಸತಕ್ಕಂತಹವರಿಗೆ? ಯಾವ ಮಟ್ಟದಲ್ಲೇ? ವಿಭಾಗ ಮಟ್ಟದಲ್ಲೇ? ಜಿಲ್ಲಾ ಮಟ್ಟದಲ್ಲೇ? ತಾಲ್ಲೂಕು ಮಟ್ಟದಲ್ಲೇ? ಯಾವ ಮಟ್ಟದಲ್ಲಿ ಭಾಗವಹಿಸಿದಲ್ಲಿ, ಈ ತರಹದ ಸೌಲಭ್ಯಗಳನ್ನು ಒದಗಿಸಿಕೊಡಲು ಸಾಧ್ಯವಿದೆ? ಎರಡನೆಯದಾಗಿ, ರಾಜ್ಯಮಟ್ಟದ ಕ್ರೀಡಾಸ್ಪರ್ಧೆ ಗಳಲ್ಲಿ ಭಾಗವಹಿಸಿ ಪ್ರತಮ ಸ್ಥಾನ ಪಡೆದಂತಹವರಿಗೆ 600 ರೂಪಾಯಿಗಳನ್ನು ವಾರ್ಷಿಕ ವಿದ್ಯಾರ್ಥಿ ವೇತನವನ್ನಾಗಿ, ಕ್ರೀಡಾ ಪ್ರೋತ್ಸಾಹ ಧನವನ್ನಾಗಿ ನೀಡುತ್ತೇವೆ ಎಂಬುದನ್ನು ತಿಳಿಸಿದ್ದಾರೆ. ನಮಗೆ ಒಂದು ನೋವಿನ ಸಂಗತಿ ಏನೆಂದರೆ, ವರ್ಷಕ್ಕೆ ಕೇವಲ 600 ರೂಪಾಯಿಗಳೆಂದರೆ, ಈ 600 ರೂಪಾಯಿಗಳಿಂದ ಇವತ್ತು ನಾವು ಕೊಡುವ ವಿಧವಾ ವೇತನ, ಮತ್ತಿತರ ವೇತನ, ಭತ್ಯೆಗಳು, ಯಾವುದನ್ನು ಕೊಡುತ್ತಿದ್ದೇವೋ, ತಿಂಗಳಿಗೆ 400 ರೂಪಾಯಿಗಳನ್ನು ಕೊಡುತ್ತಿರುವ ದಿಶೆಯಲ್ಲಿ ವರ್ಷಕ್ಕೆ 600 ರೂಪಾಯಿಗಳನ್ನು ಕೊಟ್ಟು ಯಾವ ಕ್ರೀಡಾಪಟುಗಳನ್ನು ನಾವು ತಯಾರಿಸಲು ಸಾಧ್ಯವಿದೆ? ಇದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರಿಸಬೇಕು. ಜೊತೆಗೆ, ಕ್ರೀಡಾಪಟುಗಳಲ್ಲಿ ಇವತ್ತು ಕಬಡ್ಡಿ ಕ್ರೀಡೆ ಯಾವ ರೀತಿ ನಶಿಸಿ ಹೋಗುತ್ತಿದೆ ಎಂಬುದರ ಕುರಿತಂತೆ ಹೇಳಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ Amateur Kabaddi Association...

ಉಪಾಧ್ಯಕ್ಷರು : ನಿಮ್ಮ ಪ್ರಶ್ನೆ ಏನು? ಸಮಸ್ಯೆ ಏನು? ತಾವು ಆ ಪ್ರಶ್ನೆಯಷ್ಟೇ ಕೇಳಬೇಕು. ಆದರೆ, ತಾವು ಅದರ detailsಗೆ ಹೋದರೆ ಹೇಗೆ?

ಶ್ರೀ ಎಸ್.ಬಾಲರಾಜ್ : ನಾನು ಪ್ರಸ್ತಾಪಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ನೀಡಬೇಕು. ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಬಹಳ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿ ಬಗ್ಗೆ ಒಂದು ಉತ್ತರ ಕೊಟ್ಟಿದ್ದಾರೆ. ಕಳೆದ 2002 ರಿಂದ 2006ನೇ ಸಾಲಿನವರೆಗೂ ಏಕಲವ್ಯ ಪ್ರಶಸ್ತಿ ಕೊಟ್ಟಿಲ್ಲ. ಐದನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲೂ ಒಂದು ಪ್ರಶಸ್ತಿ ಕೊಟ್ಟು ಗೌರವಿಸುವಂತಹ ಕೆಲಸವನ್ನೂ ಈ

ತರಹ ಮುಂದೂಡಿದರೆ, ಯಾವ ಕ್ರೀಡಾಪಟುಗಳನ್ನು ನಾವು ಗೌರವಿಸಿ ದಂತಹ ಕೀರ್ತಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ? ದಯಮಾಡಿ ಕಾರಣವೇನು ಎಂಬುದನ್ನು ತಾವು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ವಿವರವಾದ ಮಾಹಿತಿಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇನೆ. ಈಗ 600 ರೂಪಾಯಿಗಳನ್ನು ಕೊಡುವುದು ನಾವಲ್ಲ. ಮಾಧ್ಯಮಿಕ ಮತ್ತು ಪ್ರೌಢಶಾಲೆ ಗಳಲ್ಲಿ ಓದುವ ಮಕ್ಕಳಿಗೆ ಒಮ್ಮೊಮ್ಮೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಪ್ರಥಮ ಸ್ಥಾನಗಳಿಸಿದಲ್ಲಿ, ಅಂತಹವರಿಗೆ ನಮ್ಮ Education Department ನವರು 600 ರೂಪಾಯಿಗಳ ವಿದ್ಯಾರ್ಥಿ ವೇತನ ಕೊಡುತ್ತಾರೆಂದು ತಿಳಿಸಿದ್ದೇವೆ. ಇದನ್ನು ನಾವು ಕೊಡುವುದಲ್ಲ. ತಮಗೆ ಇನ್ನೊಂದು ಮಾತನ್ನು ಹೇಳುತ್ತೇನೆ. ತಾವು ಇನ್ನೊಂದು ವಿಚಾರವನ್ನು ಪ್ರಸ್ತಾಪಿಸಿದೀರಿ. ನಾವು ಈಗಾಗಲೇ ತಮಗೆ ಹೇಳಿದ್ದೇವೆ. ಕ್ರೀಡಾ ತರಬೇತಿಗೆ ಹೋಗುವ ಸಂದರ್ಭದಲ್ಲಾಗಲಿ, ಪಂದ್ಯಾವಳಿಯಲ್ಲಿ ಭಾಗವಹಿಸುವ ಸಂದರ್ಭದಲ್ಲಾಗಲಿ, ಅವರಿಗೆ ನಾವು ಏನೇನು ಉತ್ತೇಜನ ಕೊಡುತ್ತೇವೆ ಎನ್ನುವುದನ್ನು ತಾವು ಹೇಳಿದ್ದೀರಿ. ನಾವೂ ಕೂಡ ತಿಳಿಸಿದ್ದೇವೆ. ದಿನಭತ್ಯೆ, ವೈಜ್ಞಾನಿಕ ತರಬೇತಿ, ವೈದ್ಯಕೀಯ ವೆಚ್ಚ, ಕ್ರೀಡಾ ಸಾಮಗ್ರಿಗಳು, ಇತ್ಯಾದಿ ಕೊಡುತ್ತೇವೆಂದು ಹೇಳಿದ್ದೇವೆ. ಇದರ ಜೊತೆಗೆ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುವವರಿಗೆ ವೈಯಕ್ತಿಕ ಪ್ರಶಸ್ತಿ ಕೊಡುವಾಗ ಚಿನ್ನದ ಪದಕ ಪಡೆದವರಿಗೆ 20 ಸಾವಿರ ರೂಪಾಯಿಗಳು, ಬೆಳ್ಳಿ ಪದಕ ಪಡೆದವರಿಗೆ 15 ಸಾವಿರ ರೂಪಾಯಿಗಳು, ಕಂಚಿನ ಪದಕ ಪಡೆದಿರುವವರಿಗೆ 10 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಅದರ ಜೊತೆಗೆ, ಕ್ರೀಡಾ ಸಂಸ್ಥೆಗಳೇನಾದರೂ ಇದ್ದಲ್ಲಿ, ಬಂಗಾರದ ಪದಕ ಪಡೆದ ಸಂಸ್ಥೆಗೆ 10 ಸಾವಿರ, ಬೆಳ್ಳಿ ಪದಕ ಪಡೆದ ಸಂಸ್ಥೆಗೆ 7 ಸಾವಿರ ಮತ್ತು ಕಂಚಿನ ಪದಕ ಪಡೆದ ಸಂಸ್ಥೆಗೆ 5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಇದನ್ನು ಗುಂಪು ಕ್ರೀಡೆಗಳಲ್ಲಿ ಭಾಗವಹಿಸಿದಂತಹ ಕ್ರೀಡಾಸಂಸ್ಥೆಗೆ ಕೊಡುತ್ತೇವೆ. ಈಗ ತಾವೇನು ಪ್ರಸ್ತಾಪಿಸುತ್ತಿದ್ದೀರಿ, ಏಕಲವ್ಯ ಪ್ರಶಸ್ತಿಯನ್ನು ರಾಷ್ಟ್ರಮಟ್ಟದಲ್ಲಿ ಕೊಡುವ ಸಂದರ್ಭ ಬಂದಾಗ ಈಗ ಕರ್ನಾಟಕ ಸರ್ಕಾರದಿಂದ ಪ್ರತಿಷ್ಠಿತ ಪ್ರಶಸ್ತಿ ನೀಡಿ ಗೌರವಿಸುತ್ತೇವೆ. ಭಾರತ ಸರ್ಕಾರದಿಂದ ಅರ್ಜುನ ಪ್ರಶಸ್ತಿಯನ್ನು ಕೊಡುತ್ತೇವೆ. ರಾಜೀವ್ ಗಾಂಧಿ ಖೇಲ್ ಪ್ರಶಸ್ತಿಯನ್ನು ಕೊಡುತ್ತೇವೆ. ಪದ್ಮಶ್ರೀ ಪ್ರಶಸ್ತಿಯನ್ನು ಕೊಡುತ್ತೇವೆ. ದ್ಯಾನ್ ಚಂದ್

ಪ್ರಶಸ್ತಿಯನ್ನು ಕೊಟ್ಟು ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಗೌರವಿಸುತ್ತೇವೆ. ಅದರ ಜೊತೆಗೆ ರಾಜ್ಯ ಸರ್ಕಾರದವರು ನಾವು ಏಕಲವ್ಯ ಪ್ರಶಸ್ತಿಯನ್ನು 2–3 ವರ್ಷದಿಂದ ಅನುದಾನದ ಕೊರತೆಯಿಂದ ಕೊಡಲು ಆಗಿರಲಿಲ್ಲ. ಈಗ ಆ ಮೂರೂ ವರ್ಷದನ್ನು ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದಕ್ಕಾಗಿ ಆಯ್ಕೆ ಸಮಿತಿಯಲ್ಲಿ ಆಯ್ಕೆಯನ್ನೂ ಕೂಡ ಮಾಡಲಾಗಿದೆ. ಮುಂದಿನ ಸೆಪ್ಟೆಂಬರ್ ತಿಂಗಳಿನಲ್ಲಿ ಆ ಮೂರೂ ವರ್ಷದ ಏಕಲವ್ಯ ಪ್ರಶಸ್ತಿಯನ್ನು ಕೊಡತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ಕ್ರೀಡೆ ಈಗ ಎಲ್ಲೂ ಕೂಡ ಯುವಜನರನ್ನು ಪ್ರೋತ್ಸಾಹ ಕೊಡತಕ್ಕ ದೃಷ್ಟಿಯಿಂದ ಇರತಕ್ಕದ್ದು. ಇದಕ್ಕೆ ಬಹಳ ಮಹತ್ವ ಕೊಡಬೇಕೆಂದು ರಾಜ್ಯ ಸರ್ಕಾರ ಒಂದು ಖಾತೆಯನ್ನು ನಿರ್ಮಾಣ ಮಾಡಿ ಒಬ್ಬರು ಸಚಿವರನ್ನೂ ಮಾಡಿದೆ. ಪ್ರತ್ಯೇಕವಾಗಿರತಕ್ಕ ಅಧಿಕಾರಿ ವಿಭಾಗವನ್ನೂ ಮಾಡಿದೆ. ಕಳೆದ ಮೂರು ವರ್ಷದಿಂದ ಏಕಲವ್ಯ ಪ್ರಶಸ್ತಿ ಕೊಡಲು ಅನುದಾನದ ಕೊರತೆ ಇದೆ ಎಂಬುದು ಬಹಳ ಆಶ್ಚರ್ಯಕರವಾದ ಸಂಗತಿ. ಇದು ನಮ್ಮ ಯುವ ಜನರಿಗೆ ಒಳ್ಳೆಯದನ್ನು ಮಾಡುವ ಸಂಗತಿಯಲ್ಲ. ಮಾನ್ಯ ಸಚಿವರು ಈಗಾಗಲೇ ಏಕಲವ್ಯ ಪ್ರಶಸ್ತಿಗೆ Selection ಮಾಡಿದ್ದಾರೆ. ನನ್ನ ತಾಲ್ಲೂಕಿನಲ್ಲೂ ಒಬ್ಬ ಹುಡುಗ ಏಕಲವ್ಯ ಪ್ರಶಸ್ತಿಗಾಗಿ ಆಯ್ಕೆಯಾಗಿದ್ದಾನೆ. ಅವನು ಕಳೆದ ಐದಾರು ತಿಂಗಳಿನಲ್ಲಿ ಯಾವಾಗ ಪ್ರಶಸ್ತಿ ಕೊಡುತ್ತಾರೆ ಎಂದು ಒಂದು ನೂರು ಸಲ ಫೋನ್ ಮಾಡಿದ್ದಾನೆ. ಅವನಿಗೂ ಅಪೇಕ್ಷೆ, ಆತಂಕ ಇರುತ್ತದೆ. ಈ ರೀತಿ ಪ್ರೋತ್ಸಾಹ ಕೊಡುವುದನ್ನು ಆಗಾಗ್ಗೆ ಮಾಡಬೇಕಾಗುತ್ತದೆ. ಇದಕ್ಕೆ ಅನುದಾನದ ಕೊರತೆ ಖಂಡಿತವಾಗಿಯೂ ಆಗಬಾರದು. ದಯವಿಟ್ಟು ಹಣಕಾಸು ಸಚಿವರ ಜೊತೆ ಮಾತನಾಡಿ, ನೀವು ಒಳ್ಳೆಯ ಖಾತೆಯನ್ನು ಹೊಂದಿದ್ದೀರಿ. ಯುವ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇದನ್ನು ಮಾಡುವಂಥ ಅವಶ್ಯಕತೆ ಇದೆ. ಇದನ್ನು ಬಹಳ ಬೇಗ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವನ ಹೆಬ್ಬೆಟ್ಟು ತೆಗೆದುಕೊಂಡ ಮೇಲೆಯೇ ಏಕಲವ್ಯ ಪ್ರಶಸ್ತಿ ಕೊಡುತ್ತಾರೆ!

ಡಾ: ಕೆ.ಅನ್ನದಾನಿ : ಮಾನ್ಯ ಅಧ್ಯಕ್ಷರೆ, ನನಗನ್ನಿಸುತ್ತದೆ, ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಎಲ್ಲೇ ಆಗಿರಬಹುದು, ಮೊದಲು ಯುವಕರಿಗೆ ಪ್ರಾಶಸ್ತ್ಯವೇ ಇಲ್ಲ. ಎರಡನೆಯದಾಗಿ, ಯುವಕರು ಒಳ್ಳೆಯ ರೀತಿಯಲ್ಲಿ, ಒಳ್ಳೆಯ ಆರೋಗ್ಯವಂತರಾಗಿ ಈ ದೇಶದಲ್ಲಿ, ರಾಜ್ಯದಲ್ಲಿ

ಇರಬೇಕು ಎಂದರೆ ಕ್ರೀಡೆ ಬಹಳ ಮುಖ್ಯವಾಗಿರತಕ್ಕದ್ದು. ನನಗನ್ನಿಸುತ್ತದೆ ಈ ರಾಜ್ಯ ಮತ್ತು ಈ ದೇಶದ ಹಳ್ಳಿಗಳಲ್ಲಿ ಕೂಡ ಕ್ರಿಕೆಟ್ ವ್ಯಾಮೋಹ ಜಾಸ್ತಿಯಾಗಿಬಿಟ್ಟಿದೆ. ಅದೊಂದು ಕ್ರೀಡೆಗೆ ಮಾತ್ರ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡತಕ್ಕ ಸಂಪ್ರದಾಯ ಬರುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕ್ರೀಡೆಗೆ ಯಾವುದೇ ಪ್ರೋತ್ಸಾಹ, ಸಹಕಾರ, ಸಹಾಯ ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕ್ರೀಡೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟರೆ ಅಲ್ಲಿಯ ಮಕ್ಕಳನ್ನು ರಾಜ್ಯದ ಮುಖ್ಯವಾಹಿನಿಗೆ ತರತಕ್ಕ ಕೆಲಸವನ್ನು ಮಾಡಬಹುದು ಎಂದು ನನಗೆ ಅನ್ನಿಸುತ್ತದೆ.

ಶ್ರೀ ಎಸ್. ಬಾಲರಾಜ್ : ನಾನು ಒಂದು ವಿಚಾರವನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಎಂದು ಇದೆ. ಅದು 1972 ರಲ್ಲಿ ದಿವಂಗತ ಗುಂಡೂರಾವ್‌ರವರ ನೇತೃತ್ವದಲ್ಲಿ ಪ್ರಾರಂಭವಾದ ಒಂದು ಸಂಸ್ಥೆ. ಆ ಸಂಸ್ಥೆ ನಡೆದು ಬಂದ ಹಾದಿ, ರೀತಿ, ಬಹಳ ಮುಖ್ಯ ನಾವು ಚಿಕ್ಕ ವಯಸ್ಸಿನಲ್ಲಿ ಇದ್ದಾಗ ಕಬಡ್ಡಿ ಎಂಬ ಕ್ರೀಡೆ ವಿಶೇಷವಾದ ಕ್ರೀಡೆಯಾಗಿತ್ತು. ಇವತ್ತು ಆ ಕ್ರೀಡೆ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ಅದು ಒಬ್ಬ ಪ್ರಭಾವಿಯ ಕೈಗೆ ಸಿಕ್ಕಿ ಅಂಕಿ ಸಂಖ್ಯೆ ಇಲ್ಲದೇ, ಲೆಕ್ಕ ಇಲ್ಲದೇ, ಮೋಸದಲ್ಲಿ ಸಿಕ್ಕಿಹಾಕಿಕೊಂಡು, ಭ್ರಷ್ಟಾಚಾರಕ್ಕೆ ಸಿಲುಕಿದೆ. ಇವತ್ತು ಈ ಹಿಂದೆ ಬೆಂಗಳೂರಿನಲ್ಲಿ 95 ತಂಡಗಳು ಇತ್ತು. ಇವತ್ತು ಅದು ಕೇವಲ 20 ತಂಡಕ್ಕೆ ಇಳಿದಿದೆ ಎಂದರೆ ಬಹುಶಃ ಮುಂದಿನ ದಿನಗಳಲ್ಲಿ ನಾವು ಕಬ್ಬಡಿ ಆಟ ನೋಡಲು ಸಾಧ್ಯವಾಗುವುದಿಲ್ಲ. ಇದು ಕೇವಲ ಈ ಒಂದು ಆಟಕ್ಕೆ ಸೀಮಿತವಾದ ಪ್ರಶ್ನೆಯಲ್ಲ. ಇದು ನಾನು ಹೇಳುತ್ತಿರುವ ಒಂದು ಉದಾಹರಣೆ ಮಾತ್ರ. ಇಂಥದ್ದನ್ನೆಲ್ಲ ತಾವು ತನಿಖೆ ಮಾಡಬೇಕಾಗುತ್ತದೆ. ಇವತ್ತು ರಾಜ್ಯ ಸರ್ಕಾರ ಅಥವಾ ಯಾವುದೇ ಅಸೋಸಿಯೇಷನ್ ಮೂಲಕ ಹೆಚ್ಚು ಹೆಚ್ಚು ಟೂರ್ನಮೆಂಟ್ ನಡೆಸಲು ಅವಕಾಶ ಕೊಡಬೇಕು. ಕ್ರೀಡೆಯಲ್ಲಿ ಉತ್ಸಾಹ ಬರುವಂತೆ ಮಾಡಬೇಕು. ಇವತ್ತು ರಾಜ್ಯದಲ್ಲಿ ಯಾವುದೇ ಟೂರ್ನಮೆಂಟ್ ನೋಡಲು ಸಾಧ್ಯವಿಲ್ಲ. ತಾಲ್ಲೂಕು ಕೇಂದ್ರಗಳಲ್ಲಿ ನೋಡಲು ಇಲ್ಲವೇ ಇಲ್ಲ. ರಾಜ್ಯದಮಟ್ಟದಲ್ಲೂ ಸಾಧ್ಯವಾಗದಿರುವ ಕಾರಣದಿಂದ ಕ್ರೀಡೆ ದಿನೇ ದಿನೇ ನಶಿಸಿಹೋಗುತ್ತಿದೆ. 40 ಕ್ರೀಡೆಯಲ್ಲ 400 ಕ್ರೀಡೆ ಮಾಡಿದ್ದರೂ ಕಿಕೇಟ್ ಹೊರತುಪಡಿಸಿ ಮತ್ತೆ ಯಾವ ಕ್ರೀಡೆಗೂ ಕವಡೆ ಕಾಸಿನ ಬೆಲೆ ಇಲ್ಲ. ಆದ್ದರಿಂದ ತಾಲ್ಲೂಕು ಮಟಟ್ದಲ್ಲಿ ಹೆಚ್ಚು ಹೆಚ್ಚು ಕ್ರೀಡಾ ಶಾಲೆಗಳನ್ನು

ತೆರೆಯಬೇಕು. ಕ್ರೀಡಾ ಶಾಲೆಗೆ ಹೆಚ್ಚು ಒತ್ತು ಕೊಡಬೇಕು. ಈ ಮೋಸಗಳೇನು ನಡೆಯುತ್ತಿದೆ ಅದನ್ನು ತಪ್ಪಿಸಬೇಕು. ಶಾಲಾ ಮಟ್ಟದಲ್ಲಿ ಕ್ರೀಡೆಗೆ ಹೆಚ್ಚು ಆಸಕ್ತಿ ಕೊಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ ಅವರು ಒಳ್ಳೆಯ ಕ್ರೀಡಾಪಟುಗಳಾಗಿ ಮಾಡಬೇಕು. ಇಂಥ ವಿಷಯಗಳ ಬಗ್ಗೆ ಎಲ್ಲೂ ಮಾತನಾಡಲು ಆಗುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಕೆ.ಅನ್ನದಾನಿ : ಇದರ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ನೆ.ಲಾ.ನರೇಂದ್ರಬಾಬು : ದಯಮಾಡಿ ಒಂದೇ ಒಂದು ವಿಚಾರ. ಸಮಗ್ರ ರಾಜ್ಯದ ಯುವ ಜನತೆಯ ಪ್ರಶ್ನೆ ಇದೆ.

ಉಪಾಧ್ಯಕ್ಷರು : ಅದು ಆಗುವುದಿಲ್ಲ. ಸಚಿವರೆ ತಾವು ಉತ್ತರ ಕೊಟ್ಟುಬಿಡಿ. ನಾನು ಉತ್ತರ ಕೊಡಲು ನಿಮ್ಮನ್ನು ಕರೆದಿದ್ದೇನೆ.

ಶ್ರೀ ನೆ.ಲಾ.ನರೇಂದ್ರಬಾಬು : ಏಕೆ ಈ ರೀತಿ ತಾರತಮ್ಯ ಮಾಡುತ್ತೀರಿ?

ಉಪಾಧ್ಯಕ್ಷರು : ನರೇಂದ್ರಬಾಬುರವರು ತಾವು ಕುಳಿತುಕೊಳ್ಳಿ. ನಿಮಗೆ ಸಾಕಷ್ಟು ಅವಕಾಶಗಳನ್ನು ಕೊಡುತ್ತಿದ್ದೇವೆ. ನೀವು ಪ್ರತಿ ಸಲ ಕೈ ಎತ್ತಿದಾಗ ಆಗಲಿ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಪ್ರಶ್ನೋತ್ತರದಲ್ಲಿ ಎರಡೆರಡು ಗಂಟೆಯಾದರೂ ಮುಂದಿನ ವಿಷಯವನ್ನು ತೆಗೆದುಕೊಳ್ಳ ಬೇಡವೇ? ಆಗುವುದಿಲ್ಲ. ನಾವು ಸಚಿವರನ್ನು ಕರೆದಿದ್ದೇನೆ. ಅವರು ಮಾತನಾಡಲಿ. ನಿಮ್ಮ ಪ್ರಶ್ನೆ ಬಂದಾಗ ನೀವು ಕೇಳಿ.

ಶ್ರೀ ನೆ.ಲಾ.ನರೇಂದ್ರಬಾಬು : ದಯವಿಟ್ಟು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು : ಇಲ್ಲ ಆಗುವುದಿಲ್ಲ. ಖಂಡಿತವಾಗಿಯೂ ಕೊಡುವುದಿಲ್ಲ. ಹೀಗಾದರೆ ನಾನು ಎದ್ದು ಹೋಗುತ್ತೇನೆ.

ಶ್ರೀ ನೆ.ಲಾ.ನರೇಂದ್ರಬಾಬು : ಏಕೆ ಸಿಟ್ಟುಮಾಡಿಕೊಳ್ಳುತ್ತೀರಿ?

ಉಪಾಧ್ಯಕ್ಷರು : ನಾನು ಕೂತುಕೊಳ್ಳಿ ಎಂದರೆ ನೀವು ಸುಮ್ಮನೆ ಕುಳಿತುಕೊಳ್ಳಬೇಕು.

ಶ್ರೀ ನೆ.ಲಾ. ನರೇಂದ್ರಬಾಬು : ಕೂತುಕೊಳ್ಳುತ್ತೇವೆ. ನಾವು ಯುವಕರ ಬಗ್ಗೆ ಪ್ರಶ್ನೆ ಕೇಳಿದರೆ ಬೇಡ ಎಂದು ಹೇಳುತ್ತೀರಲ್ಲ? ಒಂದೇ ಒಂದು ನಿಮಿಷ.

ಉಪಾಧ್ಯಕ್ಷರು : ಈಗ ಕುಳಿತುಕೊಳ್ಳಿ. ಅನಂತರ ಕೇಳಿ. ಮುಂದಿನ ವಿಷಯಕ್ಕೆ ಹೋಗುವುದು ಬೇಡವೇ? ಇದು ಸರಿಯಲ್ಲ. ನಿಜವಾಗಿಯೂ ಈ ರೀತಿ ತರ್ಕ ಮಾಡುವುದು ಸರಿಯಲ್ಲ. ನೀವು ಕೈ ಎತ್ತಿದಾಗೆಲ್ಲಾ ಅವಕಾಶ ಮಾಡಿಕೊಡುತ್ತೇವಲ್ಲ. Un conneeted subjects ಗೆಲ್ಲಾ ನಿಮಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ಬಾಲರಾಜ್‌ರವರು ಪ್ರಶ್ನೆ ಕೇಳಿದ್ದಾರೆ ಅವರಿಗೆ ಉತ್ತರ ಕೊಡಬೇಕು. ಅನ್ನದಾನಿಯವರು ಕೇಳಿದ್ದಾರೆ. ಆರಗ ಜ್ಞಾನೇಂದ್ರರವರು ಕೇಳಿದರು ಅದು ಆಯಿತು. ಮೂರನೇ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನೀವು ಕೇಳಿ. ಕ್ರೀಡೆಯದ್ದೇ ಒಂದು ಗಂಟೆ ಆಯಿತು. ಶ್ರೀನಿವಾಸಗೌಡರೇ, ನೀವೂ ಹಾಗೇ ಮಾಡುತ್ತೀರಿ. ಎಷ್ಟು ಕ್ಲಾರಿಫಿಕೇಷನ್ಸ್ ಕೇಳಬೇಕು. ನೀವು ಬೇಗ ಹೇಳಿ.

ಶ್ರೀ ನೆ.ಲಾ.ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ. ನಾನು ಮಾನ್ಯ ಸಚಿವರಲ್ಲಿ ಕೇಳಲು ಬಯಸುತ್ತಿದ್ದೇನೆ. ರಾಜ್ಯದಲ್ಲಿ 40 ಕ್ರೀಡೆಯ ಬಗ್ಗೆ ಏನು ಪಟ್ಟಿಯನ್ನು ಕೊಟ್ಟಿದ್ದಾರೆ ಅದರಲ್ಲಿ ಕ್ರಿಕೆಟ್‌ನ್ನು ಹೊರತುಪಡಿಸಿ ಅಥ್ಲೆಟಿಕ್ಸ್ events ನಿಂದ ಹಿಡಿದು ಕ್ರೀಡಾಪಟುಗಳು ಮತ್ತು ಕ್ರೀಡಾ ತರಬೇತಿದಾರರು ರಾಜ್ಯದಿಂದ ವಲಸೆ ಹೋಗುತ್ತಿದ್ದಾರೆ. ಚಿನ್ನದ ಪದಕ ಪಡೆದವರಿಗೆ 20 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಆದರೆ ಜಾರ್ಖಂಡ್‌ನಲ್ಲಿ ಚಿನ್ನದ ಪದಕ ಪಡೆದಿರುವವರಿಗೆ ಒಂದು ಲಕ್ಷ ರೂಪಾಯಿ ಕೊಡುತ್ತಾರೆ. ಬೆಳ್ಳಿ ಪದಕ ಪಡೆದವರಿಗೆ ಐವತ್ತು ಸಾವಿರ ಕೊಡುತ್ತಾರೆ. ಈ ರೀತಿ ವಲಸೆ ಹೋಗುವುದನ್ನು ತಡೆಗಟ್ಟಲು ಏನಾದರು Concrete plan ಇಟ್ಟುಕೊಂಡಿದ್ದೀರ? ಶಾಶ್ವತವಾಗಿ ತರಬೇತಿದಾರರಿಗೆ ಹತ್ತಾರು ವರ್ಷಗಳಿಂದ contract basis ಮೇಲೆ ಇದ್ದಾರೆ ಅವರಿಗೆ ದಯವಿಟ್ಟು ಏನಾದರು comprehensive plan ಇದ್ದರೆ ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು : ಅವರ ಹತ್ತಿರ ದುಡ್ಡೇ ಇಲ್ಲ. ನೀವು ಏನೇನೋ ಕೇಳುತ್ತಿದ್ದೀರಿ!

ಶ್ರೀ ಚಿಕ್ಕನಗೌಡ್ರ ಸಿದ್ಧನಗೌಡ ಈಶ್ವರಗೌಡ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಅನೇಕ ಕಡೆಗಳಲ್ಲಿ ಕುಸ್ತಿ ಪಟುಗಳನ್ನು 30–50 ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಪ್ರತಿಯೊಂದು ಗ್ರಾಮದಲ್ಲಿ ಹಿಂದೆ 3–4 ಗರಡಿ ಮನೆಗಳಿದ್ದವು. ಇವತ್ತು ಆ ಗರಡಿ ಮನೆಗಳೆಂಬುದು ಪೂರ್ತಿಯಾಗಿ ನಶಿಸಿ ಹೋಗಿವೆ. ಕುಸ್ತಿ ಆಡುವಂತಹ ಪೈಲ್ವಾನ್‌ರಿಗೆ ಕುಸ್ತಿ ಕಲಿಸಲಿಕ್ಕೆ, ಶಿಕ್ಷಕರನ್ನು

ಇವತ್ತು ಹೇಗೆ ನೇಮಕ ಮಾಡಿದ್ದಾರೋ, ಹಾಗೆ ಕುಸ್ತಿ ಪಟುಗಳಿಗೆ ಕಲಿಸಲಿಕ್ಕೆ ಶಿಕ್ಷಕರನ್ನು ನೇಮಕ ಮಾಡುತ್ತಿದ್ದರು. ಗ್ರಾಮೀಣ ಮಟ್ಟದಲ್ಲಿ ಪ್ರತಿಯೊಂದು ಗ್ರಾಮದಲ್ಲಿ 30–50 ಕುಸ್ತಿ ಪಟುಗಳಿದ್ದಾರೆ..

ಉಪಾಧ್ಯಕ್ಷರು : ಮಾನ್ಯ ಚಿಕ್ಕನಗೌಡ್ರೇ, ಕಬ್ಬಡಿ subjects ಬಗ್ಗೆ ಪ್ರಶ್ನೆಯನ್ನು ಕೈಗೆತ್ತಿಕೊಂಡಿದ್ದರೆ, ನೀವು ಪೈಲ್ವಾನ್‌ರ subjects ಬಗ್ಗೆ ಮಾತನಾಡಲಿಕ್ಕೆ ಶುರು ಮಾಡಿದ್ದೀರಲ್ಲಾ? ಒಬ್ಬರು ಕಬಡ್ಡಿ ಬಗ್ಗೆ ಕೇಳುತ್ತಾರೆ, ಮತ್ತೊಬ್ಬರು ಕ್ರಿಕೆಟ್ ಬಗ್ಗೆ ಕೇಳುತ್ತಾರೆ, ಇವರು ಕುಸ್ತಿ ಬಗ್ಗೆ ಕೇಳುತ್ತಿದ್ದಾರೆ. ಹೀಗಾದರೆ ಮಾನ್ಯ ಸಚಿವರು ಯಾವುದರ ಬಗ್ಗೆ ಉತ್ತರ ಹೇಳುತ್ತಾರೆ?

ಶ್ರೀ ಹೆಚ್.ಆಂಜನೇಯ : ಅವರು first ಪೈಲ್ವಾನ್ ಗಿರಿ ಮಾಡುತ್ತಿದ್ದರು. ಆದ್ದರಿಂದ ಅದರ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ : ಆ ಕಾರಣದಿಂದ ತಾವು ದಯಮಾಡಿ ಪ್ರತಿಯೊಬ್ಬ ಕುಸ್ತಿ ಪಟುಗಳಿಗೆ 2–3 ಸಾವಿರ ರೂ.ಗಳನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ. ಇವತ್ತು ಆ ಒಬ್ಬೊಬ್ಬ ಕುಸ್ತಿ ಪಟುಗಳನ್ನು ಎತ್ತಲಿಕ್ಕೆ ನಾಲ್ಕು ಮಂದಿ ಬೇಕು. ಅವರು ಅಂತಹ ಪರಿಸ್ಥಿತಿಯೊಳಗಿದ್ದಾರೆ. ದಯಮಾಡಿ ತಾವು ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಕೊಡುವಂತೆ ಕುಸ್ತಿ ಪಟುಗಳಿಗೂ ಕೊಡಬೇಕೆಂದು ಕೋರುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸಚಿವರು ಉತ್ತರ ಹೇಳಬೇಡವೇ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಏಕೆ ಹೀಗೆ ಮಾಡುತ್ತಿದ್ದೀರಿ? ಇಲ್ಲೇನು ತಮಾಷೆ ಮಾಡುತ್ತಿದ್ದೀರಾ? ಏನು ಮಾಡುತ್ತಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಹೆಚ್.ವಿಶ್ವನಾಥ್ : ಮಾನ್ಯ ಉಪಾಧ್ಯಕ್ಷರೆ, ನಾವು ತಮಾಷೆ ಮಾಡುತ್ತಿಲ್ಲ. ನಮ್ಮದು ಮತ್ತು ಮಾನ್ಯ ಸಿದ್ದರಾಮಯ್ಯನವರದು ಒಂದು ಸಮಸ್ಯೆ ಇದೆ. ಅದಕ್ಕೆ ನಮಗೆ ಪರಿಹಾರ ಬೇಕು.

ಉಪಾಧ್ಯಕ್ಷರು : ಅದಕ್ಕೆ ಪರಿಹಾರ ಕೊಡುತ್ತಾರೆ, ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರೆ, ಎಲ್ಲರ ಪ್ರಶ್ನೆಗಳಿಗೂ ಸೇರಿಸಿ ಒಟ್ಟಿಗೆ ಉತ್ತರಿಸಿ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಉಪಾಧ್ಯಕ್ಷರೆ, ಅಮೆಚೂರ್ ಕಬಡ್ಡಿ ಸಂಸ್ಥೆ ಬಗ್ಗೆ ಮಾನ್ಯ ಬಾಲರಾಜ್‌ರವರು ಪ್ರಸ್ತಾಪಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕಬಡ್ಡಿ ನಶಿಸಿ ಹೋಗುತ್ತಿದೆ ಎನ್ನುವಂತಹ ಭಾವನೆ ಬರುವುದು ಬೇಡ. ನಾನು ನಮ್ಮ ದೇವದುರ್ಗ ತಾಲ್ಲೂಕಿನಲ್ಲಿ ರಾಷ್ಟ್ರೀಯ ಕಬಡ್ಡಿ ಪಂದ್ಯಾವಳಿಗಳನ್ನು ನಡೆಸಿದ್ದೆ. ಅದು ತಮಗೆ ಗೊತ್ತಿರಬಹುದು. ಅಲ್ಲಿ ಪಂದ್ಯಾವಳಿ ನೋಡಲು ಸೇರಿರತಕ್ಕಂಥ ಜನ ಬಹುಶಃ ಬೇರೆ ಕಡೆ ಎಲ್ಲೂ ಸೇರಿರಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಅಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಕಬಡ್ಡಿ ಪಂದ್ಯಾವಳಿ ನಡೆಸಲಾಗಿದೆ. ಸುಮಾರು 20–30 ಸಾವಿರಕ್ಕೂ ಹೆಚ್ಚು ಜನ ಅಲ್ಲಿ ಸೇರಿದ್ದರು. ಕಬ್ಬಡಿ ಕ್ರೀಡೆ ಬಗ್ಗೆ ಗ್ರಾಮೀಣ ಭಾಗದಲ್ಲಿ ಅತ್ಯಂತ ಪ್ರೀತಿ, ಆಸಕ್ತಿ ಮತ್ತು ಕಾಳಜಿ ಇದೆ. ಅದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಅದಕ್ಕಾಗಿಯೇ ನಾವು ಎಲ್ಲೆಲ್ಲಿ ಸಂಸ್ಥೆಗಳನ್ನು ನಡೆಸಲಾಗುತ್ತಿದೆಯೋ, ಆ ಸಂಸ್ಥೆಗಳಿಗೆ ಎಲ್ಲಾ ರೀತಿಯ ಸಹಕಾರವನ್ನು ಇಲಾಖೆ ಕೊಡುತ್ತದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅಮೆಚೂರ್ ಕಬಡ್ಡಿ ಸಂಸ್ಥೆಯವರು ಯಾರ್ಯಾರನ್ನು Participation ಮಾಡಿಸಬೇಕಾಗಿತ್ತು? ಯಾರ್ಯಾರನ್ನು ಅವರು involvement ಮಾಡಿಸಬೇಕಾಗಿತ್ತೋ, ಅದನ್ನು ಮಾಡುತ್ತಿಲ್ಲ, ಅದರಲ್ಲಿ ಬಹಳ ಅವ್ಯವಹಾರ ನಡೆದಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ವಿವರಗಳನ್ನು ಮಾನ್ಯ ಸದಸ್ಯರ ಮುಖಾಂತರ ಪಡೆದು, ಸಂಬಂಧಪಟ್ಟಂತಹ ಸಂಸ್ಥೆಯ ಬಗ್ಗೆ ನಮ್ಮ ಅಧಿಕಾರಿಗಳಿಂದ ನಾನು ತನಿಖೆ ಮಾಡಿಸುತ್ತೇನೆ. ತನಿಖೆ ನಡೆಸಿ ವಿವರ ಪಡೆದು, ಅದನ್ನು ತಮ್ಮ ಗಮನಕ್ಕೆ ತರುವುದಾಗಿ ತಿಳಿಯಬಯ ಸುತ್ತೇನೆ. ಮಾನ್ಯ ಆರಗ ಜ್ಞಾನೇಂದ್ರರವರು ಪ್ರಶಸ್ತಿಯನ್ನು ಕೊಡತಕ್ಕಂಥದ್ದು ಬಂದ್ ಆಗಿದೆ ಎಂದು ನನ್ನ ಗಮನಕ್ಕೆ ತಂದಿದ್ದಾರೆ. 2–3 ವರ್ಷಗಳಿಂದಲೂ ಪ್ರಶಸ್ತಿ ಕೊಟ್ಟಿರಲಿಲ್ಲ. ಈಗ ನಮಗೆ ಹಣದ ಅವಕಾಶ ಆಗಿದೆ. ಸರ್ಕಾರದವರು ಅದಕ್ಕಾಗಿ ಅನುದಾನವನ್ನು ಕೊಟ್ಟಿದ್ದಾರೆ. ಈ ವರ್ಷ ಮೂರು ವರ್ಷದ ಏಕಲವ್ಯ ಪ್ರಶಸ್ತಿಯನ್ನು ನಾವು ಸೆಪ್ಟೆಂಬರ್ ಕೊನೆಯ ವಾರದಲ್ಲಿ ಕೊಡುತ್ತೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇನ್ನು ಕುಸ್ತಿ ವಿಷಯದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾವು ಕಳೆದ ವರ್ಷ ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಆಡಿರತಕ್ಕವರಿಗೆ ಬೇರೆ ಬೇರೆ ರೀತಿ 200–1000 ರೂ.ಗಳವರೆಗೆ ಭತ್ಯೆಯನ್ನು ಕೊಡುತ್ತಿದ್ದೇವೆ. ಆ ಹಣವನ್ನು ಹೆಚ್ಚು ಮಾಡುವುದು ಸರ್ಕಾರದ ಪರಿಶೀಲನೆ ಯಲ್ಲಿದೆ ಎನ್ನುವ

ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರಾದ ನರೇಂದ್ರಬಾಬುರವರು ಬೇರೆ ಬೇರೆ ರಾಜ್ಯಕ್ಕೆ ಇಲ್ಲಿರತಕ್ಕಂಥ ಕ್ರೀಡಾಪಟುಗಳು ವಲಸೆ ಹೋಗುತ್ತಿದ್ದಾರೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ಅವರು ಜಾರ್ಖಂಡ್‌ಗೆ ಹೋಗಿದ್ದಾರೆ. ಅವರು ಅಲ್ಲಿಗೆ ಏಕೆ ಹೋಗಿದ್ದಾರೆಂದರೆ, ಅಲ್ಲಿ ಕ್ರೀಡಾಪಟುಗಳಿಗೆ ತರಬೇತಿ ಕೊಡಲಿಕ್ಕೆ ತರಬೇತಿದಾರರಿಗೆ ಹೆಚ್ಚಿನ ಹಣವನ್ನು ಕೊಡುತ್ತಾರೆ. ನಮ್ಮಲ್ಲಿ ಆ ರೀತಿ ಕೊಡಲಿಕ್ಕೆ ಆಗಿಲ್ಲ. ಈಗ ತಾವು ಹೇಳಿರತಕ್ಕಂಥ ಮಾತನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಕ್ರೀಡಾಪಟುಗಳ ಪ್ರತಿಭೆ ಅರಳುವ ರೀತಿಯಲ್ಲಿ ತರಬೇತಿಯನ್ನು ಕೊಡಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆ.

ಕರ್ನಾಟಕದಲ್ಲಿರುವ ಮಾಜಿ ಸೈನಿಕರಿಗೆ ಅಧಿಕ ಸೇವಾ ಅವಧಿಯ ಮಾನ್ಯತೆ ನೀಡುವ ಬಗ್ಗೆ

248 (1527) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದಲ್ಲಿ ಮರು ನೇಮಕಗೊಂಡ ಮಾಜಿ ಸೈನಿಕರಿಗೆ ನಾಗರಿಕ ಸೇವಾ ನಿಯಮಗಳು 1958ರ ನಿಯಮದ 247ಎ (1) ಮತ್ತು (5) ರನ್ವಯ 8 ವರ್ಷ ಅಧಿಕ ಸೇವಾ ಅವಧಿಯ (Weightage) ಮಾನ್ಯತೆ ನೀಡುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅಧಿಸೂಚನೆ ಸಂಖ್ಯೆ ಎಫ್‌ಡಿ/ಎಸ್‌ಆರ್‌ಎ 2004 ದಿನಾಂಕ: 4–11–2004 ರಲ್ಲಿ 8 ವರ್ಷಗಳ ಬದಲಾಗಿ 4 ವರ್ಷಗಳೆಂದು ತಿದ್ದುಪಡಿ ಮಾಡಲು ಕಾರಣವೇನು;

ಇ) ಇದರಿಂದ ಮಾಜಿ ಸೈನಿಕರು ಯುದ್ಧದಲ್ಲಿ ಮಾಡಿದ ಸೈನಿಕರ ಮಡದಿ (ವಿಧವೆಯರು) ಹಾಗೂ ಮಾಜಿ ಸೈನಿಕರಿಗೆ ಅವಲಂಬಿತರಿಗೆ ಅನ್ಯಾಯವಾಗಿರುವುದು ನಿಜವಲ್ಲವೆ;

ಈ) ಹಾಗಿದ್ದಲ್ಲಿ 8 ವರ್ಷದಿಂದ 4 ವರ್ಷ ಕಡಿತಗೊಳಿಸಿರುವುದನ್ನು ಸರಿಪಡಿಸಿ ಮಾಜಿ ಸೈನಿಕರಿಗೆ ನ್ಯಾಯ ದೊರಕಿಸಿಕೊಡಲಾಗುವುದೇ?